**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪ ಸಿಂಹ ನಾಯಕ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ ನೀಡುವ ಬಗ್ಗೆ.**

## ಗಮನ ಸೆಳೆಯುವ ಸೂಚನೆ

**ಕೇವಲ ಸಹಕಾರಿ ವಲಯವಲ್ಲದೇ, ಇಡೀ ನಾಡನ್ನೇ ಆತಂಕಕ್ಕೆ ದೂಡಿದ ಮಂಗಳೂರಿನ ಕೋಟೆಕಾರು ಸಹಕಾರಿ ಬ್ಯಾಂಕ್ ದರೋಡೆ ಪ್ರಕರಣದ ಹಿನ್ನಲೆಯಲ್ಲಿ ಸಹಕಾರಿ ಬ್ಯಾಂಕ್ ವ್ಯವಸ್ಥೆಯ ಸುರಕ್ಷತೆಯ ಬಗ್ಗೆಯೇ ಸಾರ್ವಜನಿಕರು ಅಪನಂಬಿಕೆಗೆ ಈಡಾಗಿದ್ದಾರೆ. ಗ್ರಾಮೀಣ ಆರ್ಥಿಕತೆಯ ಆತ್ಮವಾಗಿರುವ ಸೊಸೈಟಿಗಳು, ಭದ್ರತೆ ಮತ್ತು ಸುರಕ್ಷತೆ ವಿಚಾರದಲ್ಲಿ ನಿರ್ಲಕ್ಷತೆ ಮತ್ತು ಉದಾಸೀನತೆಯನ್ನು ತೋರುತ್ತಾ ಬಂದಿರುವುದು ಈ ರೀತಿಯ ಪ್ರಕರಣಗಳ ಪುನರಾವರ್ತನೆಯಿಂದ ಮತ್ತೊಮ್ಮೆ ಸಾಬೀತಾಗಿದೆ.**

**ಜನ ಸುರಕ್ಷತೆ ಬಯಸಿ ನಂಬಿಕೆಯಿಟ್ಟು ಸೊಸೈಟಿಗಳ ಜೊತೆ ವ್ಯವಹಾರ ನಡೆಸುತ್ತಿರುತ್ತಾರೆ, ಆ ನಂಬಿಕೆಯನ್ನು ಉಳಿಸಿಕೊಳ್ಳಲು ಬೇಕಾದ ಅಗತ್ಯ ಭದ್ರತಾ ವ್ಯವಸ್ಥೆಯನ್ನು ಇನ್ನೂ ಕಲ್ಪಿಸದೇ ಇರುವುದು ಹಾಗೂ ಸಹಕಾರಿ ಬ್ಯಾಂಕ್ ವ್ಯವಸ್ಥೆಗೆ ಅಗತ್ಯ ಭದ್ರತೆ ಹೆಚ್ಚಿಸಲು ಸರ್ಕಾರ ಸೂಕ್ತ ಕ್ರಮವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.**

## ಉತ್ತರ

ಮಂಗಳೂರು ತಾಲ್ಲೂಕು ಕೋಟೆಕಾರು ವ್ಯವಸಾಯ ಸೇವಾ ಸಹಕಾರ ಸಂಘ ನಿ., ಇದರ ಕೆ.ಸಿ.ರೋಡ್‌ನ ಶಾಖೆಯಲ್ಲಿ ದಿನಾಂಕ:17.01.2025 ರಂದು ಮಧ್ಯಾಹ್ನ 1:00 ಘಂಟೆಯ ಸಮಯದಲ್ಲಿ ಐದು ಜನ ಅಪರಿಚಿತ ಮುಸುಕುದಾರಿಗಳು ಪಿಸ್ತೂಲ್ ಮತ್ತು ಮಚ್ಚು ಹಿಡಿದು ಶಾಖೆಯ ಒಳನುಗ್ಗಿ ಸಿಬ್ಬಂದಿ ಮತ್ತು ಗ್ರಾಹಕರನ್ನು ಬೆದರಿಸಿ ಶಾಖೆಯ ಭದ್ರತಾ ಕೊಠಡಿಯ ಬೀಗವನ್ನು ಬಲವಂತವಾಗಿ ತೆಗೆಯಿಸಿ ಗ್ರಾಹಕರು ಅಡಮಾನವಿರಿಸಿದ ಬಂಗಾರ ಆಭರಣಗಳು ಹಾಗೂ ವಹಿವಾಟಿನ ನಗದನ್ನು ದೋಚಿಕೊಂಡು ತೆರಳಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಇಲಾಖೆಯ ಅಧಿಕಾರಿಗಳಿಗೆ ಶಾಖೆಗೆ ತಕ್ಷಣ ಭೇಟಿ ನೀಡಿ ಹಾಜರಿದ್ದ ಸಂಘದ ಸಿಬ್ಬಂದಿಗಳಿಂದ ಮಾಹಿತಿ ಸಂಗ್ರಹಿಸಿ ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸಲು ಹಾಗೂ ಸುರಕ್ಷತೆಯ ಅಗತ್ಯ ಕ್ರಮಕೈಗೊಂಡು ವರದಿ ನೀಡುವಂತೆ ಸೂಚನೆಯನ್ನು ನೀಡಲಾಗಿರುತ್ತದೆ.

ಸಂಘದಿಂದ ದಿನಾಂಕ:18.01.2025 ರಂದು ಉಳ್ಳಾಲ ಆರಕ್ಷಕ ಠಾಣೆಗೆ ದೂರನ್ನು ದಾಖಲಿಸಿರುತ್ತಾರೆ. ಉಳ್ಳಾಲ ಆರಕ್ಷಕ ಅಧಿಕಾರಿಗಳು ಹಾಗೂ ಅವರ ತಂಡದವರು ಕೆ.ಸಿ. ರೋಡ್ ಶಾಖೆಗೆ ಭೇಟಿ ನೀಡಿ ಪರಿಶೀಲಿಸಿ ಎಲ್ಲಾ ಮಾಹಿತಿಯನ್ನು ಪಡೆದುಕೊಂಡು ಅವರಲ್ಲಿಯೇ ತಂಡವನ್ನು ರಚಿಸಿಕೊಂಡು ತೀವ್ರಗತಿಯಲ್ಲಿ ಆರೋಪಿತರನ್ನು ಬಂಧಿಸಿದ್ದು ಕಳುವಾಗಿರುವುದು ಒಟ್ಟು 1,569 ಪ್ಯಾಕೇಟ್‌ಗಳಾಗಿದ್ದು, ಚಿನ್ನಾಭರಣದ ಒಟ್ಟು ತೂಕ 22,178.28 ಗ್ರಾಂಗಳಾಗಿದ್ದು ನಿವ್ವಳ ತೂಕ 18,880.53 ಗ್ರಾಂಗಳಾಗಿದ್ದು, ಕಳುವಾಗಿರುವ ಚಿನ್ನಾಭರಣದ ಒಟ್ಟು ಮೌಲ್ಯ ಅಂದಾಜು ರೂ.15.00 ಕೋಟಿಗಳಾಗಿರುತ್ತದೆ. ಬಂಧಿತ ಆರೋಪಿಗಳಿಂದ ವಶಪಡಿಸಿಕೊಂಡಿರುವ ಆಭರಣಗಳ ಒಟ್ಟು ತೂಕ 18,314.00 ಗ್ರಾಂಗಳಾಗಿರುತ್ತದೆ. ಕಳುವಾದ ಒಟ್ಟು ನಗದು ರೂ.11,67,044.00 ಗಳಾಗಿದ್ದು ಆ ಪೈಕಿ ರೂ.3,80,500.00ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪೋಲೀಸ್ ಇಲಾಖೆ ವಶಪಡಿಸಿಕೊಂಡಿರುವ ಚಿನ್ನಾಭರಣ ಮತ್ತು ನಗದನ್ನು ಸಂಘಕ್ಕೆ ಪಡೆಯಲು

ಕ್ರಮವಿಟ್ಟಿದ್ದು ಈ ಸಂಬಂಧ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಂಗಳೂರು ಇಲ್ಲಿ ಪ್ರಕರಣ ವಿಚಾರಣೆಯಲ್ಲಿದ್ದು ದಿನಾಂಕ:03.03.2025ಕ್ಕೆ ಪ್ರಕರಣ ತೀರ್ಮಾನಕ್ಕೆ ನಿಗದಿಯಾಗಿದೆ.

ಮುಂದುವರೆದು, ಪ್ರಕರಣ ಕಂಡು ಬಂದ ಹಿನ್ನೆಲೆಯಲ್ಲಿ ದಿನಾಂಕ:04.02.2025ರಂದು ಮಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಮಂಗಳೂರು ನಗರ ಪೊಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಹಾಗೂ ಸಹಕಾರ ಇಲಾಖೆಯ ಸಹಯೋಗದೊಂದಿಗೆ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಇತರೆ ಎಲ್ಲಾ ರೀತಿಯ ಸಹಕಾರ ಸಂಘ / ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆ ನಡೆಸಿ ಸೊಸೈಟಿಗಳ ಸುರಕ್ಷತೆ ಹಾಗೂ ಭದ್ರತೆಯ ದೃಷ್ಟಿಯಿಂದ ಅಳವಡಿಸಿಕೊಳ್ಳಬೇಕಾದ ಸೌಕರ್ಯಗಳು ಹಾಗೂ ಇನ್ನಿತರ ಸುರಕ್ಷತೆಗಳ ಬಗ್ಗೆ ಚರ್ಚಿಸಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ ಅದು ಅಲ್ಲದೇ ಪ್ರತಿ ಮಾಹೆ ನಡೆಯುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಸಂಘಗಳು ಭದ್ರತೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಈ ಕೆಳಕಂಡ ಸುರಕ್ಷತಾ/ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿರುತ್ತದೆ.

1. ಸಂಘದಲ್ಲಿ ಹೊಸ ತಂತ್ರಜ್ಞಾನವುಳ್ಳ ಸಿ.ಸಿ.ಟಿವಿ ಕ್ಯಾಮರ ಅಳವಡಿಕೆ ಹಾಗೂ 24 ಗಂಟೆಗಳ ಕಾಲ ಚಾಲ್ತಿಯಿರುವ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು.
2. ಉತ್ತಮ ಗುಣಮಟ್ಟದ ಅಲರಾಮ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು.
3. ಸಂಘದಲ್ಲಿ ಭದ್ರತಾ ಸಿಬ್ಬಂದಿಗಳನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳುವುದು.
4. ತುರ್ತು ಸಂದರ್ಭಗಳಲ್ಲಿ ಪೊಲೀಸ್ ಕಂಟ್ರೋಲ್ ರೂಮ್‌ಗೆ ಕರೆ ಮಾಡಿ ತಿಳಿಸುವ ವ್ಯವಸ್ಥೆ.
5. ಬೈಲಾದಲ್ಲಿರುವಂತೆ ಮಿತಿಗಿಂತ ಹೆಚ್ಚಿನ ನಗದನ್ನು ಇರಿಸಿಕೊಳ್ಳದಂತೆ ಕ್ರಮವಹಿಸುವುದು.
6. ಸಂಘಕ್ಕೆ ಭೇಟಿ ನೀಡುವ ಸದಸ್ಯರು / ಗ್ರಾಹಕರ ಬಗ್ಗೆ ಗಮನವಿರಿಸಿ, ಅನುಮಾನಾಸ್ಪದ ವ್ಯಕ್ತಿಗಳ / ಅಪರಿಚಿತ ವ್ಯಕ್ತಿಗಳನ್ನು ಭದ್ರತಾ ದೃಷ್ಟಿಯಿಂದ ಚೆಕ್ ಮಾಡುವಂತೆ ತಿಳಿಸಲಾಗಿದೆ.
7. ಬೆಲೆಬಾಳುವ ಆಭರಣಗಳಿಗೆ ವಿಮೆ ಮಾಡಲು ತಿಳಿಸಲಾಗಿದೆ.
8. ಸೈಬರ್ ಕ್ರೈಮ್ ಬಗ್ಗೆ ಮಾಹಿತಿ ನೀಡಲಾಗಿದೆ
9. ನಕಲಿ ಆಭರಣಗಳ ಪರಿಶೀಲನೆಯ ಬಗ್ಗೆ ಸಹ ಮಾಹಿತಿ ನೀಡಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಚಾಚೂ ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆ ನೀಡಲಾಗಿರುತ್ತದೆ. ಇದೇ ರೀತಿಯಾಗಿ ಪ್ರಾಂತದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳಿಗೂ ಸಹ ಭದ್ರತೆಯ ದೃಷ್ಟಿಯಿಂದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಿಸಲಾಗಿದ್ದು, ಆಗಿಂದಾಗ್ಗೆ ಇಲಾಖಾ ವತಿಯಿಂದಲೂ ಸಹ ಸಂಘಗಳಿಗೆ ಭೇಟಿ ನೀಡಿ ಭದ್ರತೆಯ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದ್ದು, ಸಹಕಾರ ಸಂಘಗಳಲ್ಲಿ ಭದ್ರತೆಗೆ ಹೆಚ್ಚಿನ ಗಮನ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಈ ರೀತಿಯ ಪ್ರಕರಣ ನಡೆಯದಂತೆ ಕ್ರಮವಿಡಲಾಗುತ್ತಿದೆ.

**ಸಂಖ್ಯೆ: ಸಿಒ 33 ಸಿಸಿಬಿ 2025**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು